ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-06-1971.

## *ಮೂರೂ ಲೋಕಗಳಲ್ಲಿ ಬಾಪ್ ದಾದಾರ ಸಮೀಪವಿರುವ ರತ್ನಗಳ ಲಕ್ಷಣಗಳು*

(तीनों लोकों में बापदादा के समीप रहने वाले रत्नों की निशानियाँ)

ಇದು ಯಾವ ಗುಂಪಾಗಿದೆ? ಈ ಗುಂಪನ್ನು ಶೃಂಗರಿಸಿ ಯಾವ ರೀತಿ ತಯಾರು ಮಾಡಲಾಗಿದೆ? ಪರಿವರ್ತನೆಯಾಗಿ ಹೋಗುತ್ತಿರುವಿರಲ್ಲವೇ? ಹಾಗಾದರೆ ಇವರನ್ನು ಪರಿವರ್ತನೆ ಮಾಡಿ ಹೇಗೆ ತಯಾರು ಮಾಡಿರುವಿರಿ? ಯಾವಾಗ ನಾವು ಏನಾಗಿದ್ದೇವೆ ಎಂದು ತಮ್ಮ ಸಾಕ್ಷಾತ್ಕಾರ ಮಾಡಿಕೊಳ್ಳುತ್ತೀರೋ ಆಗಲೇ ಬೇರೆಯವರನ್ನು ಹಾಗೆಯೇ ತಯಾರು ಮಾಡುವಿರಿ. ಈ ಗುಂಪು ನಾವು ಆತ್ಮಿಕ ಸೇವಾಧಾರಿಗಳಾಗಿ ಹೋಗುತ್ತಿದ್ದೇವೆ ಎಂದು ತಿಳಿದಿದ್ದಾರೆ. ಎಲ್ಲರೂ ತಮ್ಮನ್ನು ಸೇವಾಧಾರಿ ಎಂದು ತಿಳಿದು ಸೇವಾಸ್ಥಾನಕ್ಕೆ ಹೋಗುತ್ತಿರುವಿರೋ ಅಥವಾ ತಮ್ಮ ಮನೆಗೆ ವಾಪಸ್ಸು ಹೋಗುತ್ತಿರುವಿರೋ? ಏನೆಂದು ತಿಳಿದು ಹೋಗುತ್ತೀರಿ? ತಮ್ಮ ಲೌಕಿಕ ಪರಿವಾರಕ್ಕೆ ಹೋಗುವುದಾದರೆ ಅದನ್ನು ಏನೆಂದು ತಿಳಿಯುವಿರಿ? ಅದೂ ಸಹ ಸೇವೆಯ ಸ್ಥಾನವಾಗಿದೆ ಎಂದೋ ಅಥವಾ ಕೇವಲ ಸೇವಾಕೇಂದ್ರವಷ್ಟೇ ಸೇವಾಸ್ಥಾನವಾಗಿದೆ ಎಂದು ತಿಳಿಯುವಿರೋ? ತಮ್ಮ ಮನೆಯನ್ನೂ ಸಹ ಸೇವಾಸ್ಥಾನವೆಂದು ತಿಳಿದರೆ ತನ್ನಿಂದ ತಾನೇ ಸೇವೆ ಆಗುವುದು. *ಸೇವಾಧಾರಿಗಳಿಗೆ ಪ್ರತಿಯೊಂದು ಸ್ಥಾನದಲ್ಲಿಯೂ ಸೇವೆಯಿದೆ. ಎಲ್ಲಿಯೇ ಇರಲಿ, ಎಲ್ಲಿಗಾದರೂ ಹೋಗಲಿ ಆದರೆ ಸೇವಾಧಾರಿಗೆ ಎಲ್ಲಾ ಸಮಯದಲ್ಲಿ ಮತ್ತು ಎಲ್ಲಾ ಸ್ಥಾನದಲ್ಲಿ ಸೇವೆಯೇ ಕಂಡು ಬರುವುದು ಮತ್ತು ಸೇವೆಯಲ್ಲಿಯೇ ತೊಡಗುವರು. ಮನೆಯನ್ನೂ ಸೇವೆಯ ಸ್ಥಾನವೆಂದು ತಿಳಿಯುವರು. ಬುದ್ಧಿಯಲ್ಲಿ ಸೇವೆ ನೆನಪಿರುವುದರಿಂದ, ಈ ನೆನಪಿನ ಶಕ್ತಿಯಿಂದ ಕರ್ಮಬಂಧನವೂ ಸಹಜ ಮತ್ತು ಶೀಘ್ರ ನಾಶವಾಗುವುದು. ಆದ್ದರಿಂದ ಸೇವಾಧಾರಿಯಾಗಿ ಹೋಗುತ್ತಿರುವಿರೆಂದರೆ ಪ್ರತಿ ಸಂಕಲ್ಪದಲ್ಲಿಯೂ ಸೇವೆ ಮಾಡಬೇಕು. ಒಂದು ಕ್ಷಣ ಅಥವಾ ಒಂದು ಸಂಕಲ್ಪವೂ ಸೇವೆಯಿಲ್ಲದೇ ಇರಬಾರದು. ಇವರನ್ನೇ ಸತ್ಯ ಆತ್ಮಿಕ ಸೇವಾಧಾರಿ ಎನ್ನುವರು.* ಆತ್ಮಿಕ ಸೇವಾಧಾರಿಗಳು ಆತ್ಮರ ಅಥವಾ ಆತ್ಮರಿಂದಲೂ ಸೇವೆ ಮಾಡಬಲ್ಲರು. ಹೇಗೆ ಪ್ರಕಾಶ ಸ್ಥಂಭವು ಒಂದು ಸ್ಥಾನದಲ್ಲಿದ್ದು ನಾಲ್ಕು ದಿಕ್ಕುಗಳಿಗೆ ತನ್ನ ಪ್ರಕಾಶದಿಂದ ಸೇವೆಯನ್ನು ಮಾಡುತ್ತದೆಯೋ ಹಾಗೆ ಅವರು ಒಂದು ಸ್ಥಾನದಲ್ಲಿದ್ದರೂ ಬೇಹದ್ದಿನ ಸೃಷ್ಟಿಯ ಬೇಹದ್ದಿನ ಸೇವೆಯಲ್ಲಿ ತತ್ಪರರಾಗಿರುವರು. ಹೀಗೆ ಲೈಟ್ ಹೌಸ್ ಮತ್ತು ಮೈಟ್ ಹೌಸ್ ಆಗಿದ್ದೀರಾ? ಎರಡೂ ಆಗಿರುವಿರೋ ಅಥವಾ ಲೈಟ್ ಹೌಸ್ ಆಗಿದ್ದೀರಿ ಮತ್ತು ಮೈಟ್ ಹೌಸ್ ಇನ್ನೂ ಆಗಬೇಕಾಗಿದೆಯೋ? ಜ್ಞಾನಸ್ವರೂಪ ಎಂದರೆ ಲೈಟ್ ಹೌಸ್ ಮತ್ತು ಯೋಗಯುಕ್ತ ಅವಸ್ಥೆ ಯಾಗಿದೆ ಮೈಟ್ ಹೌಸ್. ಎಲ್ಲರೂ ಜ್ಞಾನಿ ಆತ್ಮ ಮತ್ತು ಯೋಗಿ ಆತ್ಮ ಆಗಿ ಹೋಗುತ್ತಿರುವಿರಿ ಅಲ್ಲವೇ? ಅಥವಾ ಇನ್ನು ಏನಾದರೂ ಉಳಿದಿದೆಯೇ? ಪೂರ್ಣ ಶೃಂಗಾರವಾಗಿದೆಯಾ? ಕುಮಾರಿ ಅವಸ್ಥೆಯಲ್ಲಿ ಸ್ವಚ್ಚತೆ ಮತ್ತು ತಮ್ಮನ್ನು ಸರಿಯಾಗಿ ಇಟ್ಟುಕೊಳ್ಳುವ ವಿಶೇಷತೆ ಇರುತ್ತದೆ. ಆದ್ದರಿಂದ ಈ ಭಟ್ಟಿಯಲ್ಲಿಯೂ ಪೂರ್ಣ ರೀತಿ ಜ್ಞಾನ, ಗುಣಗಳಿಂದ ಶೃಂಗರಿಸಲಾಗಿದೆ. ಶೃಂಗರಿಸಿಕೊಂಡು ಹೋಗುತ್ತಿರುವಿರೋ ಅಥವಾ ಇನ್ನೂ ಅಲ್ಲಿ ಹೋಗಿ ಮತ್ತಷ್ಟು ಶೃಂಗಾರ ಮಾಡಿಕೊಳ್ಳುವುದಿದೆಯೇ? ಪೂರ್ಣ ಅಸ್ತ್ರ- ಶಸ್ತ್ರಗಳಿಂದ ತಯಾರಾಗಿ ಯುದ್ಧದ ಮೈದಾನಕ್ಕೆ ಹೋಗುತ್ತಿರುವಿರಿ. ಯಾರು ಅಸ್ತ್ರ-ಶಸ್ತ್ರಧಾರಿಗಳಾಗಿರುವರೋ ಅವರು ಸದಾ ವಿಜಯಶಾಲಿಗಳಾಗಿದ್ದಾರೆ. ಶಸ್ತ್ರಗಳು ಶತ್ರುವನ್ನು ಎದುರಿಗೆ ಬರಲು ಬಿಡುವುದಿಲ್ಲ. ಹಾಗಾದರೆ ಶತ್ರು ದೂರದಿಂದಲೇ ನೋಡಿ ಓಡಿ ಹೋಗುವಂತಹ ಶಸ್ತ್ರಧಾರಿಗಳಾಗಿದ್ದೀರಾ? ಎಲ್ಲರೂ ಹೀಗೆ ಆಗಿದ್ದೀರಾ? ಮಧುಬನದ ವರದಾನ ಭೂಮಿಯ ಪ್ರಭಾವದಲ್ಲಿ ಹೇಳುತ್ತಿರುವಿರೋ ಅಥವಾ ಅವಿನಾಶಿ ಶಸ್ತ್ರಧಾರಿ ಅಥವಾ ಶೃಂಗರಿಸಲ್ಪಟ್ಟವರನ್ನಾಗಿ ತಮ್ಮನ್ನು ಮಾಡಿಕೊಂಡಿರುವಿರಾ? ನಾಳೆ ಈ ಅಬು ಪರ್ವತದಿಂದ ಕೆಳಗಿಳಿದಾಗ ಅದೇ ಉನ್ನತ ಸ್ಥಿತಿಯಿರುವುದೇ? ಎಲ್ಲಿಗೇ ಹೋದರೂ ತಮ್ಮೊಂದಿಗೆ ತಾವೇ ಮಾಡಿಕೊಂಡ ಅಥವಾ ಮಧುಬನದ ಸಂಘಟನೆಯಲ್ಲಿ, ಈಶ್ವರೀಯ ಸಭೆಯಲ್ಲಿ ಮಾಡಿದ ಪ್ರತಿಜ್ಞೆಯನ್ನು ಸದಾ ಕಾಲಕ್ಕೆ ಪಕ್ಕಾ ಮಾಡಿಕೊಳ್ಳಿ. ಇಂತಹ ಅವಿನಾಶಿ ಮುದ್ರೆಯನ್ನು ಪ್ರತಿಯೊಬ್ಬರೂ ತಮಗೆ ತಾವೇ ಹಾಕಿಕೊಂಡಿರುವಿರಾ? ನಿಶ್ಚಯದ

ವಿಜಯ ಅವಶ್ಯವಾಗಿದೆ ಮತ್ತು ಧೈರ್ಯವಿಟ್ಟುಕೊಳ್ಳುವವರಿಗೆ ಬಾಪ್ ದಾದಾ ಮತ್ತು ಸರ್ವ ಈಶ್ವರೀಯ ಪರಿವಾರದ ಆತ್ಮರ ಸಹಯೋಗ ಇರುತ್ತದೆ. ಯಾರು ಎಷ್ಟೇ ತಮ್ಮ ಧೈರ್ಯವನ್ನು ಅಲುಗಾಡಿಸುವ ಪ್ರಯತ್ನ ಮಾಡಿದರೂ ಮಾಡಿದ ಪ್ರತಿಜ್ಞೆಯ ಶಕ್ತಿಯಿಂದ ಸ್ವಲ್ಪವೂ ಕಾಲನ್ನು ಅಲುಗಾಡಿಸಬಾರದು. ಯಾವ ಕಾಲುಗಳು? ಯಾವುದರ ಮುಖಾಂತರ ನೆನಪಿನ ಯಾತ್ರೆಯನ್ನು ಮಾಡುತ್ತೀರೋ ಅವು, ಬೇಕಾದರೆ ಸೃಷ್ಟಿಯೇ ಅಲುಗಾಡಲಿ ಆದರೆ ತಾವು ಇಡೀ ಸೃಷ್ಟಿಯಲ್ಲಿಯ ಆತ್ಮರಿಗಿಂತ ಶಕ್ತಿಶಾಲಿಯಾಗಿದ್ದೀರಿ. ಒಂದು ಕಡೆಗೆ ಇಡೀ ಸೃಷ್ಟಿಯಿರಲಿ, ಇನ್ನೊಂದು ಕಡೆಗೆ ತಾವು ಒಬ್ಬರೇ ಇದ್ದರೂ ತಮ್ಮ ಒಬ್ಬರ ಶಕ್ತಿ ಶ್ರೇಷ್ಠವಾಗಿದೆ ಏಕೆಂದರೆ ಸರ್ವಶಕ್ತಿವಾನ್ ತಂದೆ ತಮ್ಮ ಜೊತೆಗಿದ್ದಾರೆ. ಆದ್ದರಿಂದ ಶಿವಶಕ್ತಿಯರ ಗಾಯನವಿದೆ. ಶಿವ ಮತ್ತು ಶಕ್ತಿಯರು ಜೊತೆಗಿದ್ದಾಗ ಸೃಷ್ಟಿಯ ಆತ್ಮರು ಯಾವ ಲೆಕ್ಕ, ಅನೇಕರಿದ್ದರೂ ಒಬ್ಬರಿಗೆ ಸಮಾನವಲ್ಲ. ಇಷ್ಟೊಂದು ನಿಶ್ಚಯಬುದ್ಧಿ ಅಥವಾ ಪ್ರತಿಜ್ಞೆಯನ್ನು ಪಾಲನೆ ಮಾಡುವ ಧೈರ್ಯವಿಟ್ಟುಕೊಳ್ಳುವವರಾಗಿ ಹೋಗುತ್ತಿರುವಿರಲ್ಲವೇ? ಪ್ರಾಯೋಗಿಕ(ಪ್ರ್ಯಾಕ್ಟಿಕಲ್) ಪರೀಕ್ಷೆಯಾಗುವುದು. ಸೈದ್ಧಾಂತಿಕ(ಥೇರಿ) ಪರೀಕ್ಷೆ ಸಹಜವಾಗಿರುತ್ತದೆ. ಯಾರಿಗಾದರೂ ಸಾಪ್ತಾಹಿಕ ಕೋರ್ಸ್ ಮಾಡುವುದಾಗಲಿ, ಅಥವಾ ಸಂಗ್ರಹಾಲಯ ಅಥವಾ ಪ್ರದರ್ಶನಿ ತಿಳಿಸುವುದಾಗಲಿ ಸೈದ್ಧಾಂತಿಕ ಪರೀಕ್ಷೆಯಾಗಿದೆ. ಆದರೆ ಪ್ರಾಯೋಗಿಕ ಪರೀಕ್ಷೆಯಲ್ಲಿ ಯಾರು ಪಾಸಾಗುತ್ತಾರೋ ಅವರೇ ಬಾಪ್ ದಾದಾರವರ ಸಮೀಪವಿರುವ ರತ್ನಗಳಾಗಿದ್ದಾರೆ ಸಮೀಪವಿರಲು ಇಷ್ಟಪಡುತ್ತೀರೋ? ಅಥವಾ ದೂರದಿಂದ ನೋಡಲು ಇಷ್ಟಪಡುತ್ತಿರೋ? ಪಾಸ್ ವಿತ್ ಆನರ್ ಆಗುತ್ತೀರಾ? (ಗೌರವಯುತವಾಗಿ ತೇರ್ಗಡೆಯಾದವರು). ಈ ಧೈರ್ಯವನ್ನು ಕೂಡ ಇಟ್ಟು ಕೊಳ್ಳಬೇಕು. ಈ ಧೈರ್ಯವನ್ನು ಅವಿನಾಶಿ ಮಾಡಲು ಒಂದು ಮಾತನ್ನು ಸದಾ ಗಮನದಲ್ಲಿಟ್ಟುಕೊಳ್ಳಿ.

ಯಾವುದೇ ಸಂಗದೋಷದಲ್ಲಿ ಬರದೇ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಅನೇಕ ಪ್ರಕಾರದ ಆಕರ್ಷಣೆಗಳು ಪರೀಕ್ಷೆಯ ರೂಪದಲ್ಲಿ ಬರುವವು ಆದರೆ ಆಕರ್ಷಿತರಾಗಬಾರದು. ಹರ್ಷಿತಮುಖದವರಾಗಿ ಪರೀಕ್ಷೆಯೆಂದು ತಿಳಿದು ಪಾಸಾಗಬೇಕು. ಸಂಗದೋಷ ಅನೇಕ ಪ್ರಕಾರದ್ದಿರುತ್ತದೆ. ಮಾಯೆ ಸಂಕಲ್ಪಗಳ ರೂಪದಲ್ಲಿಯೂ ತನ್ನ ಸಂಗದ ರಂಗನ್ನು ಹಚ್ಚಲು ಪ್ರಯತ್ನ ಮಾಡುತ್ತದೆ. ಆದ್ದರಿಂದ ಈ ವ್ಯರ್ಥ ಸಂಕಲ್ಪಗಳ ಅಥವಾ ಮಾಯೆಯ ಆಕರ್ಷಣೆಯ ಸಂಕಲ್ಪಗಳಲ್ಲಿ ಎಂದಿಗೂ ನಾಪಾಸಾಗಬಾರದು ಮತ್ತು ಸ್ಥೂಲ ಸಂಬಂಧಿಗಳ ಸಂಗ ಅದರಲ್ಲಿ ಕೇವಲ ಪರಿವಾರಕ್ಕೆ ಸಂಬಂದಪಟ್ಟವರಲ್ಲ ಆದರೆ ಪರಿವಾರದ ಜೊತೆಜೊತೆಗೆ ಇನ್ನೂ ಕೆಲವು ಸಂಬಂಧಗಳ ಸಂಗ, ಸಖಿಯ ಸಂಗವೂ ಸಂಬಂಧದ ಸಂಗವಾಗಿದೆ. ಯಾವುದೇ ಸಂಬಂಧಿಯ ಸಂಗದಲ್ಲಿ ಬರಬಾರದು, ಯಾರದೇ ವಾಣಿಯ ಸಂಗದೋಷದಲ್ಲಿಯೂ ಬರಬಾರದು. ವಾಣಿಯಿಂದ ಉಲ್ಟಾ ಸಂಗದ ರಂಗು ಹತ್ತುತ್ತದೆ. ಇದರಿಂದಲೂ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು ಮತ್ತು ಅನ್ನದ ಸಂಗದೋಷವೂ ಇದೆ. ಒಂದು ವೇಳೆ ಎಂದಾದರೂ, ಯಾರದಾದರೂ ಸಮಸ್ಯೆಯನುಸಾರ ಅಥವಾ ಯಾವುದೇ ಸಂಬಂಧಿಯ ಸ್ನೇಹದ ವಶದಿಂದ ಅನ್ನದೋಶದಲ್ಲಿ ಬಂದದ್ದಾದರೆ ಈ ಅನ್ನವೂ ತಮ್ಮ ಮನಸ್ಸಿಗೆ ಸಂಗದ ರಂಗನ್ನು ಹಚ್ಚುತ್ತದೆ. ಆದ್ದರಿಂದ ಇದರಿಂದಲೂ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಅದೇ ರೀತಿ ಕರ್ಮದ ಸಂಗವೂ ಇರುತ್ತದೆ. ಆದ್ದರಿಂದ ಇದರಿಂದಲೂ ತಮ್ಮನ್ನು ರಕ್ಷಿಸಿಕೊಳ್ಳಬೇಕು. ಆಗ "ಗೌರವಯುತವಾಗಿ ತೇರ್ಗಡೆ' ಯಾಗುವಿರಿ. ಸಂಗದೋಷದ ಪರೀಕ್ಷೆಯಲ್ಲಿ ಪಾಸಾದರೆ ಸಮೀಪ ಬರುವಿರೆಂದು ತಿಳಿಯಿರಿ. ಸಂಗದೋಷದಲ್ಲಿ ಬಂದರೆ ದೂರವಾಗುವಿರಿ. ಆಗ ನಿರಾಕಾರಿ ವತನದಲ್ಲಾಗಲಿ, ಸಂಗಮಯುಗದಲ್ಲಾಗಲಿ, ಭವಿಷ್ಯದಲ್ಲಾಗಲಿ ಸಮೀಪವಿರಲಾಗುವುದಿಲ್ಲ.

ಒಂದು ಸಂಗದೋಷ ಮೂರೂ ಲೋಕದಲ್ಲಿ ದೂರ ಮಾಡುತ್ತದೆ. ಒಂದು ಸಂಗದೋಷದಿಂದ ರಕ್ಷಿಸಿಕೊಂಡರೆ ಮೂರೂ ಲೋಕಗಳಲ್ಲಿ, ಮೂರೂ ಕಾಲಗಳಲ್ಲಿ ತಂದೆಯ ಸಮೀಪವಿರುವ ಭಾಗ್ಯ ಪ್ರಾಪ್ತಿ ಮಾಡಿಕೊಳ್ಳಬಹುದು. ಈ ಗುಂಪಿಗೆ ಬಾಪ್ ದಾದಾ ಹಂಸಗಳ ಸಂಘಟನೆಯೆಂದು ಹೇಳುತ್ತಾರೆ. **ಹಂಸಗಳ ಕರ್ತವ್ಯ ಅಥವಾ ಸ್ವರೂಪ ಏನಾಗಿದೆ? ಸ್ವರೂಪವಾಗಿದೆ ಪವಿತ್ರತೆ ಮತ್ತು ಕರ್ತವ್ಯವಾಗಿದೆ ಸದಾ ಗುಣ ರೂಪದ ಮುತ್ತುಗಳನ್ನು ಧಾರಣೆ ಮಾಡಿಕೊಳ್ಳುವುದು, ಅವಗುಣ ರೂಪದ ಕಲ್ಲುಗಳನ್ನು ಎಂದಿಗೂ ಬುದ್ಧಿಯಲ್ಲಿ ಸ್ವೀಕಾರ ಮಾಡುವುದಿಲ್ಲ. ಇದಾಗಿದೆ ಹಂಸಗಳ ಕರ್ತವ್ಯ** ಆದರೆ ಈ ಕರ್ತವ್ಯದ ಪಾಲನೆ ಮಾಡಲು ಬಾಪ್ ದಾದಾರ ಆಜ್ಞೆ ಸದಾ ಸಿಗುತ್ತಿರುತ್ತದೆ. ಅದಾವ ಆಜ್ಞೆ? ಆ ಆಜ್ಞೆಯ ತಮ್ಮ ಚಿತ್ರವೂ ಮಾಡಲ್ಪಟ್ಟಿದೆ. ಕೆಟ್ಟದ್ದನ್ನು ನೋಡಬೇಡಿ, ಕೆಟ್ಟದ್ದನ್ನು ಕೇಳಬೇಡಿ,

ಕೆಟ್ಟದ್ದನ್ನು ಮಾಡಬೇಡಿ ಮತ್ತು ಯೋಚಿಸಬೇಡಿ, ಒಂದು ವೇಳೆ ಈ ಆಜ್ಞೆಯನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಂಡರೆ ನಿಜವಾದ ಹಂಸವಾಗಿ ಸರ್ವಗುಣಗಳ ಸಾಗರನಾದ ತಂದೆಯ ಸಾಗರದ ದಡದಲ್ಲಿ ಸದಾ ಕುಳಿತಿರುವಿರಿ. ಆದ್ದರಿಂದ ತಮ್ಮ ಬುದ್ಧಿಯನ್ನು ಜ್ಞಾನಸಾಗರ ತಂದೆಯನ್ನು ಬಿಟ್ಟು ಬೇರೆಲ್ಲೂ ಹೋಗಗೊಡಬೇಡಿ ಏಕೆಂದರೆ ಹಂಸಗಳ ಸ್ಥಾನ ಸಾಗರವಾಗಿದೆ. ತಮ್ಮನ್ನು ಹಂಸವೆಂದು ತಿಳಿದು ತಮ್ಮ ಪ್ರತಿಜ್ಞೆಗಳನ್ನು ಪಾಲನೆ ಮಾಡುತ್ತಿರಿ. ತಿಳಿಯಿತೇ? ಮುತ್ತು ಮತ್ತು ಕಲ್ಲನ್ನು ಬೇರ್ಪಡಿಸುವುದನ್ನು ಕಲಿತಿರುವಿರಾ? ಕಲ್ಲು ಏನಾಗಿರುತ್ತದೆ, ರತ್ನವೇನಾಗಿರುತ್ತದೆ? ಜ್ಞಾನಪೂರ್ಣರು ಆಗಿದ್ದೀರಲ್ಲವೇ? ಈ ಹಂಸಗಳು ಯಾವ ಅದ್ಭುತವನ್ನು ಮಾಡಿ ತೋರಿಸುವರು ಎಂದು ಈಗ ನೋಡೋಣ. ಹಂಸಗಳ ಸಂಘಟನೆ ಇಚ್ಛೆಯಿಲ್ಲದಿದ್ದರೂ ತನ್ನೆಡೆಗೆ ಆಕರ್ಷಿಸುತ್ತದೆ. ಆದ್ದರಿಂದ ಸಂಗದೋಷದಿಂದ ರಕ್ಷಿಸಿಕೊಂಡು ಈಶ್ವರೀಯ ಸಂಗದಲ್ಲಿರಬೇಕು. ಅನೇಕ ಸಂಗಗಳನ್ನು ಬಿಟ್ಟು ಒಬ್ಬನ ಸಂಗದಲ್ಲಿರಬೇಕು. ಈಶ್ವರೀಯ ಸಂಗ ಕೇವಲ ಶರೀರದಿಂದ ಇರುವುದಿಲ್ಲ. ಆದರೆ ಬುದ್ಧಿಯಿಂದ ಈಶ್ವರೀಯ ಸಂಗದಲ್ಲಿರಬೇಕು. ಬುದ್ಧಿ ಸದಾ ಈಶ್ವರೀಯ ಸಂಗದಲ್ಲಿರಲಿ ಮತ್ತು ಸ್ಥೂಲ ಸಂಬಂಧದಲ್ಲಿಯೂ ಈಶ್ವರೀಯ ಸಂಗವಿರಲಿ. ಈ ಸಂಗದ ಆಧಾರದ ಮೇಲೆ ಅನೇಕ ಸಂಗದೋಷಗಳಿಂದ ಸುರಕ್ಷಿತರಾಗಿರುವಿರಿ. ಕೇವಲ ಸ್ಥಳಾಂತರಿಸಬೇಕು. ಕೋಮಲತೆಯನ್ನು ಅದ್ಭುತದಲ್ಲಿ ಪರಿವರ್ತನೆ ಮಾಡಬೇಕು. ಕೋಮಲತೆಯನ್ನು ತೋರಿಸಬೇಡಿ. ಕೇವಲ ಸಂಸ್ಕಾರಗಳನ್ನು ಪರಿವರ್ತನೆ ಮಾಡುವಲ್ಲಿ ಕೋಮಲವಾಗಬೇಕು. ಕರ್ಮದಲ್ಲಿ ಕೋಮಲವಾಗಬೇಡಿ. ಇದರಲ್ಲಿ ಶಕ್ತಿರೂಪರಾಗಬೇಕು. ಶಕ್ತಿಸ್ವರೂಪದ ಕವಚವನ್ನು ಸದಾ ಧಾರಣೆ ಮಾಡದಿದ್ದರೆ ಕೋಮಲವಿದ್ದವರಿಗೆ ಬಹಳ ಬೇಗ ಬಾಣ ತಾಗುತ್ತದೆ. ಬಾಣವನ್ನೂ ಸಹ ಕೋಮಲ ಜಾಗದಲ್ಲಿ ತಾಗುವಂತೆ ಬಿಡುತ್ತಾರೆ. ಆದ್ದರಿಂದ ಶಕ್ತಿಸ್ವರೂಪದ ಕವಚವನ್ನು ಧಾರಣೆ ಮಾಡಿದರೆ ಶಕ್ತಿ ರೂಪವಾಗುವಿರಿ. ಆಗ ಮಾಯೆಯ ಯಾವ ಬಾಣವೂ ತಾಗುವುದಿಲ್ಲ. ಕರ್ಮದಲ್ಲಿ ಕೋಮಲರಾಗಬೇಡಿ. ಕೇವಲ ಪರಿವರ್ತನೆಯಾಗಲು ಅಸಲಿ ಚಿನ್ನವಾಗಿ. ಮುಖದಲ್ಲಿ, ಚಲನವಲನದಲ್ಲಿ (ನಡೆನುಡಿಯಲ್ಲಿ) ಕೋಮಲತೆಯನ್ನು ತರಬೇಡಿ, ಈ ಎಲ್ಲಾ ಮಾತುಗಳನ್ನು ಸ್ಮೃತಿಯಲ್ಲಿಟ್ಟುಕೊಂಡು "ಗೌರವಯುತವಾಗಿ ತೇರ್ಗಡೆ" ಯಾಗಬೇಕು. ಈ ಗುಂಪಿನಲ್ಲಿ ಪ್ರಾಯೋಗಿಕ ಪ್ರಮಾಣವನ್ನು ಕೊಟ್ಟು ಪ್ರತ್ಯಕ್ಷ ಪ್ರಮಾಣವಾಗುವಂತಹ ಭರವಸೆಯ ರತ್ನಗಳು ಕಂಡು ಬರುತ್ತಿವೆ. ಪ್ರತಿಯೊಬ್ಬರಿಗೂ ಒಬ್ಬರಿಗಿಂತ ಇನ್ನೊಬ್ಬರು ಮುಂದೆ ಹೋಗಬೇಕು. ಬೇರೆಯವರು ಮುಂದೆ ಹೋಗುವುದನ್ನು ನೋಡಿ ಖುಷಿ ಪಡಬೇಡಿ. ಬೇರೆಯವರನ್ನು ನೋಡುತ್ತಿದ್ದರೆ ಭಕ್ತರಾಗುವಿರಿ. ಭಕ್ತರು ಕೇವಲ ನೋಡಿ ಅವರ ಗುಣಗಾಯನ ಮಾಡುತ್ತಾರೆ. ನೀವು ಭಕ್ತರಾಗಬೇಕಿಲ್ಲ. ಜ್ಞಾನಸ್ವರೂಪ ಮತ್ತು ಯೋಗಯುಕ್ತ, "ಜ್ಞಾನಿ ಮತ್ತು ಯೋಗಿ ಆತ್ಮ" ಆಗಬೇಕು. ಈಗ ಪರೀಕ್ಷೆಯ ಫಲಿತಾಂಶವನ್ನು ನೋಡೋಣ. ಯಾರು ಪ್ರತ್ಯಕ್ಷ ಪ್ರಮಾಣವನ್ನು ಕೊಡುವರೋ ಅವರು ಮೊದಲ ನಂಬರ್ ನಲ್ಲಿ ಬರುವಿರಿ. ಯಾರು ಯೋಚಿಸುತ್ತಿರುವಿರೋ ಅವರಿಗೆ ತಂದೆಯೂ ರಾಜ್ಯಭಾಗ್ಯವನ್ನು ಕೊಡಲು ಯೋಚಿಸುವರು. ಯಾರು ತಮ್ಮನ್ನು ತಾವೇ ಒಪ್ಪಿಸಿಕೊಳ್ಳುತ್ತಾರೋ ಅವರಿಗೆ ಬಾಪ್ ದಾದಾ ಸಹ ವಿಶ್ವದ ರಾಜಧಾನಿಯ ರಾಜ್ಯಭಾಗ್ಯವನ್ನು ಮೊದಲು ಕೊಡುವರು. ಒಂದುವೇಳೆ ತಮ್ಮನ್ನು ತಾವು ಒಪ್ಪಿಸಿಕೊಳ್ಳದಿದ್ದರೆ ಬಾಪ್ ದಾದಾ ಸಹ ವಿಶ್ವದ ಸಿಂಹಾಸನವನ್ನು ಏಕೆ ಕೊಡುವರು? ತಮ್ಮನ್ನು ತಾವೇ ಒಪ್ಪಿಸಿಕೊಂಡರೆ ಅದನ್ನು ಉಡುಗೊರೆ ಎಂದು ಕರೆಯಲಾಗುತ್ತದೆ. ತುಂಬಿದ ಗಾಳಿಯ ಬಲೂನುಗಳಾಗಬೇಡಿ. ಅವು ಬಹಳ ತೀವ್ರವಾಗಿ ಹಾರುತ್ತವೆ ಆದರೆ ಅಲ್ಪಕಾಲಕ್ಕಾಗಿ ಇಲ್ಲಿ ಅವಿನಾಶಿ ಶಕ್ತಿಯನ್ನು ತಮ್ಮಲ್ಲಿ ತುಂಬಿಕೊಳ್ಳಬೇಕು. ಅಲ್ಪಕಾಲದ ಆಮ್ಲಜನಕದ ಆಧಾರವನ್ನು ತೆಗೆದುಕೊಳ್ಳಬೇಡಿ. ಒಳ್ಳೆಯದು.

ಅವ್ಯಕ್ತ ಮುರಳಿ 11-06-1971.

***ಮೂರು ಲೋಕಗಳಲ್ಲಿ ಬಾಪ್ ದಾದಾರವರ ಸಮೀಪವಿರುವ ರತ್ನಗಳ ಲಕ್ಷಣಗಳು***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸತ್ಯವಾದ ಆತ್ಮಿಕ ಸೇವಾಧಾರಿಯಾಗಿದ್ದೇನೆ.( ಪ್ರತೀ ಸಂಕಲ್ಪ, ಪ್ರತೀಕ್ಷಣದಲ್ಲಿ ಸೇವೆ ಸಮಾವೇಶವಾಗಿದೆ)

2. ನಾನು ಮನೆಯನ್ನು ಕೂಡ ಸೇವಾಸ್ಥಾನವಾಗಿ ತಯಾರು ಮಾಡಿಕೊಂಡಿದ್ದೇನೆ.

3. ನಾನು ಶಕ್ತಿಶಾಲಿ ಸೇವೆಯ ಸ್ಮೃತಿಯಿಂದ ಕರ್ಮ ಬಂಧನವನ್ನು ಸಹಜವಾಗಿ ಸಮಾಪ್ತಿ ಮಾಡಿಕೊಂಡಿದ್ದೇನೆ.

4. ನಾನು ಲೈಟ್ ಹೌಸ್ ಮೈಟ್ ಹೌಸ್ ಸ್ವರೂಪ. (ಲೈಟ್ ಹೌಸ್: ಜ್ಞಾನಸ್ವರೂಪ, ಮೈಟ್ ಹೌಸ್: ಯೋಗಯುಕ್ತ ಸ್ಥಿತಿ.)

5. ನಾನು ಜ್ಞಾನ, ಗುಣ, ಶಕ್ತಿಗಳೊಂದಿಗೆ ಅಲಂಕರಿಸಿಕೊಂಡಿರುವ ಅವಿನಾಶಿ ಶಸ್ತ್ರಧಾರಿಯಾಗಿದ್ದೇನೆ.

6. ನಾನು ಸ್ವಯಂನಿಂದ ಸ್ವಯಂ ಸಂಘಟನೆಯ ಮಧ್ಯದಲ್ಲಿ ಈಶ್ವರೀಯ ಸಭೆಯಲ್ಲಿ ಯಾವ ಪ್ರತಿಜ್ಞೆಯನ್ನು ಮಾಡಿದ್ದೇನೆಯೋ ಅದನ್ನು ಸ್ಥಿರವಾಗಿಟ್ಟುಕೊಂಡು ಯಾರು ಎಷ್ಟೇ ಅಲುಗಾಡಿಸಲು ಪ್ರಯತ್ನಿಸಿದರೂ ಸ್ಥಿರವಾಗಿ ಇದ್ದೇನೆ.

7. ಸರ್ವಶಕ್ತಿವಂತನಾದ ತಂದೆ ನನ್ನ ಜೊತೆಗಿರುವ ಕಾರಣ ನಾನು ಸೃಷ್ಟಿಯಲ್ಲಿರುವ ಎಲ್ಲಾ ಆತ್ಮರಿಗಿಂತಲೂ ಶಕ್ತಿಶಾಲಿಯಾಗಿರುವ ಶಿವಶಕ್ತಿ ಸ್ವರೂಪ.

8. ನಾನು ಪ್ರ್ಯಾಕ್ಟಿಕಲ್ ಪೇಪರ್ ನಲ್ಲಿ ಗೌರವಯುತವಾಗಿ ತೇರ್ಗಡೆಯಾಗಿರುವ (ಪಾಸ್ ವಿತ್ ಆನರ್) ಬಾಪ್ ಸಮಾನ ರತ್ನ.

9. ನಾನು ಅವಿನಾಶಿ ಧೈರ್ಯಸ್ವರೂಪವಾಗಿ ಎಲ್ಲಾ ವಿಧವಾದ ಆಕರ್ಷಣೆಯಿಂದ, ಮಾಯೆಯ ಸಂಘದೋಷದಿಂದ, ವ್ಯರ್ಥ ಸಂಕಲ್ಪಗಳ ಆಕರ್ಷಣೆಯಿಂದ, ಸ್ಥೂಲ ಸಂಬಂಧಿಕರ ಸಾಂಗತ್ಯದಿಂದ, ಸ್ನೇಹಿತರ ಸಾಂಗತ್ಯದಿಂದ, ಅನ್ನದ ಸಾಂಗತ್ಯದಿಂದ, ಕರ್ಮದ ಸಾಂಗತ್ಯದಿಂದ ರಕ್ಷಿಸಿಕೊಂಡು ತಂದೆಗೆ ಸಮೀಪವಿರುವ ಭಾಗ್ಯಶಾಲಿಯಾಗಿದ್ದೇನೆ.

10. ನಾನು ಕಲ್ಲು ಮತ್ತು ಮುತ್ತುಗಳನ್ನು ಬೇರ್ಪಡಿಸಬಲ್ಲ ಹೋಲೀ ಹಂಸ. ನನ್ನ ಸ್ವರೂಪ ಪವಿತ್ರತೆ, ನನ್ನ ಕರ್ತವ್ಯ ಬುದ್ಧಿಯಿಂದ ಅವಗುಣ ರೂಪಿ ಕಲ್ಲುಗಳನ್ನು ಬಿಟ್ಟು ಸದ್ಗುಣರೂಪಿ ಮುತ್ತುಗಳನ್ನು ಮಾತ್ರ ಸ್ವೀಕರಿಸುವುದು.

11. ಸತ್ಯಹಂಸವಾದ ನನಗೆ ತಂದೆಯಿಂದ ಲಭಿಸಿರುವ ಆಜ್ಞೆ ಕೆಟ್ಟದ್ದನ್ನು ನೋಡಬಾರದು, ಕೇಳಬಾರದು, ಮಾತನಾಡಬಾರದು & ಯೋಚಿಸಬಾರದು ಎಂಬ ಆಜ್ಞೆಯ ಆಜ್ಞಾಕಾರಿ.

12. ನಾನು ಎಲ್ಲಾ ವಿಧವಾದ ಸಂಘ ದೋಷದಿಂದ ದೂರವಾಗಿರುತ್ತಾ ಸದಾ ಈಶ್ವರೀಯ ಸಾಂಗತ್ಯದಲ್ಲಿದ್ದು ಎಲ್ಲಾ ವಿಧವಾದ ದೋಷಗಳಿಂದ ಸುರಕ್ಷಿತವಾಗಿ ಇದ್ದೇನೆ.

13. ನಾನು ಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಳ್ಳುವುದರಲ್ಲಿ ಕೋಮಲವಾಗಿ ಮತ್ತು ಕರ್ಮದಲ್ಲಿ ಶಕ್ತಿ ಸ್ವರೂಪ ವಾಗಿದ್ದೇನೆ.

14. ನಾನು ಸ್ವಯಂಗೆ ಸ್ವಯಂ ಪ್ರತ್ಯಕ್ಷ ಪ್ರಮಾಣವನ್ನು ಕೊಡಲು ಒಪ್ಪಿಸಿಕೊಳ್ಳುವ ವಿಶ್ವರಾಜ್ಯ ಸಿಂಹಾಸನಾಧಿಕಾರಿ ಆಗಿದ್ದೇನೆ.